# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **2366**

ಸದಸ್ಯರ ಹೆಸರು : ಶ್ರೀ ಟಿ.ಎನ್ ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 27-03-2026

ಉತ್ತರಿಸುವ ಸಚಿವರು : ಕೃಷಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪಿ.ಎಂ ಕಿಸಾನ್ ಯೋಜನೆಯಡಿ ರಾಜ್ಯದ ಅರ್ಹ ರೈತರುಗಳು ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು; ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಪಿ.ಎಂ.ಕಿಸಾನ್ ಯೋಜನೆಯು ಶೇ.100 ರಷ್ಟು ಕೇಂದ್ರ ವಲಯ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಅರ್ಹ ಫಲಾನುಭವಿಗಳಿಗೆ ವಾರ್ಷಿಕ ರೂ.6000/- ಗಳ ಆರ್ಥಿಕ ನೆರವು (ಪ್ರತಿ ನಾಲ್ಕು ತಿಂಗಳಿಗೆ ರೂ.2000/- ಗಳಂತೆ) ನೇರ ನಗದು ವರ್ಗಾವಣೆ ಮೂಲಕ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ನೀಡಲಾಗುತ್ತಿದೆ.<br><br>ಕೇಂದ್ರ ಸರ್ಕಾರದ ಈ ಯೋಜನೆಯಲ್ಲಿ ಪ್ರತಿ ನಾಲ್ಕು ತಿಂಗಳಿಗೊಮ್ಮೆ ಫಲಾನುಭವಿಗಳನ್ನು ಲಭ್ಯ ಮಾಹಿತಿ / ಮಾನದಂಡಗಳನ್ವಯ ತಂತ್ರಾಂಶ ಮೂಲಕ ಪರಿಶೀಲನೆಗೆ ಒಳಪಡಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಅನರ್ಹರೆಂದು ಗುರುತಿಸಲಾದ ಹಾಗೂ ಮರುಪರಿಶೀಲನೆ ಅವಶ್ಯವಿರುವ ಪ್ರಕರಣಗಳನ್ನು ಆರ್ಥಿಕ ನೆರವು ವರ್ಗಾವಣೆ ಪ್ರಕ್ರಿಯೆಯಲ್ಲಿ ತಡೆಹಿಡಿಯಲಾಗುತ್ತದೆ. ಈ ಪ್ರಕರಣಗಳನ್ನು ಭೌತಿಕ ಪರಿಶೀಲನೆ ವರದಿ ನಂತರ ಅಂತಿಮವಾಗಿ ಅರ್ಹ / ಅನರ್ಹಗೊಳಿಸಲಾಗುತ್ತದೆ.<br><br>ಪ್ರಸ್ತುತ, ರಾಜ್ಯದಲ್ಲಿ ಪಿ.ಎಂ.ಕಿಸಾನ್ ಯೋಜನೆಯಡಿ ನೊಂದಣಿಯಾದ ನಂತರ ಅನರ್ಹ ಮತ್ತು ಆರ್ಥಿಕ ನೆರವು ಸ್ಥಗಿತವಾದ ರೈತ ಫಲಾನುಭವಿಗಳ ವಿವರ ಈ ಕೆಳಗಿನಂತಿದೆ.<br><br>1. **ಅನರ್ಹ ಪ್ರಕರಣಗಳು** |

| ವಿವರ | ಫಲಾನುಭವಿಗಳ ಸಂಖ್ಯೆ |
|---|---|
| ಆದಾಯ ತೆರಿಗೆ ಪಾವತಿದಾರರು (ಅನರ್ಹರು) | 73,489 |
| ಮರಣ ಪ್ರಕರಣ | 2,02,810 |
| ಮಾರ್ಗಸೂಚಿಯನ್ವಯ ಅನರ್ಹ ಫಲಾನುಭವಿಗಳು | 6,54,243 |
| **ಒಟ್ಟು** | **9,30,542** |

<table>
<tr>
<td></td>
<td></td>
<td>
<table>
<tr><td colspan="2">2. ಸ್ಥಗಿತಗೊಂಡಿರುವ ಪ್ರಕರಣಗಳು</td></tr>
<tr><td>ವಿವರ</td><td>ಫಲಾನುಭವಿಗಳ ಸಂಖ್ಯೆ</td></tr>
<tr><td>ಇ-ಕೆವೈಸಿ ಮಾಡಿಸದೇ ಇರುವವರು</td><td>3,83,767</td></tr>
<tr><td>ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆಯಾಗದೇ ಇರುವ ಫಲಾನುಭವಿಗಳು (ಡಿಸೆಂಬರ್ 2025-ಮಾರ್ಚ್ 2026 ರ ಚಾತುರ್ಮಾಸಿಕ ಅವಧಿಯಲ್ಲಿ)</td><td>2,09,014</td></tr>
<tr><td>ಮರುಪರಿಶೀಲನ ಪ್ರಕ್ರಿಯೆ ಹಂತದಲ್ಲಿರುವ ಪ್ರಕರಣಗಳು (ಭೂಮಾಲೀಕತ್ವ ಬದಲಾವಣೆ, ಒಂದೇ ಕುಟುಂಬ ಸದಸ್ಯರು)</td><td>3,81,735</td></tr>
<tr><td>ಒಟ್ಟು</td><td>9,74,516</td></tr>
</table>
ಇ – ಕೆವೈಸಿ ಮಾಡಿಸದೇ ಇರುವ ರೈತರಿಗೆ, ಇ – ಕೆವೈಸಿ ಮಾಡಿಸಲು ಇಲಾಖೆಯಿಂದ ವ್ಯಾಪಕ ಪ್ರಚಾರ ನೀಡಲಾಗಿದೆ, ಎಸ್.ಎಂ.ಎಸ್ ಮೂಲಕ ಮಾಹಿತಿ ರವಾನೆ ಮಾಡಲಾಗುತ್ತಿದೆ ಹಾಗೂ ಗ್ರಾಮಮಟ್ಟದಲ್ಲಿ ಇಲಾಖೆ ಸಿಬ್ಬಂದಿಗಳಿಂದ ಇಂತಹ ಫಲಾನುಭವಿಗಳನ್ನು ತಲುಪಲು ಕ್ರಮವಹಿಸಲಾಗಿದೆ.
ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆಯಾಗದ ಫಲಾನುಭವಿಗಳಿಗೆ ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆ ಮಾಡಲು ಎಸ್.ಎಂ.ಎಸ್, ಗ್ರೂಪ್ ಕಾಲ್ ಮೂಲಕ ಮಾಹಿತಿ ರವಾನೆ ಮಾಡಲಾಗುತ್ತಿದೆ ಹಾಗೂ ರಾಜ್ಯ, ಜಿಲ್ಲಾ ಮಟ್ಟದ ಬ್ಯಾಂಕರ್ ಸಮಿತಿಗಳಿಗೆ ಮನವಿ ಮಾಡಲಾಗಿದೆ ಹಾಗೂ, ಇಂಡಿಯನ್ ಪೋಸ್ಟ್ ಪೇಮೆಂಟ್ ಬ್ಯಾಂಕ್ ನ ಸಹಯೋಗದೊಂದಿಗೆ ಪ್ರತಿ ಅಂಚೆ ಕಚೇರಿಗಳಲ್ಲಿ ಆಧಾರ್ ಜೋಡಿತ ಬ್ಯಾಂಕ್ ಖಾತೆ ತೆರೆಯಲು ಆಂದೋಲನಗಳನ್ನು ಹಮ್ಮಿಕೊಳ್ಳಲಾಗಿದೆ.
ಕ್ಷೇತ್ರ ಮಟ್ಟದಲ್ಲಿ ಮರುಪರಿಶೀಲನೆ ಅವಶ್ಯವಿರುವ ಪ್ರಕರಣಗಳನ್ನು ಭೌತಿಕ ಪರಿಶೀಲನೆಗೆ ಒಳಪಡಿಸಿ ವರದಿ ನೀಡಲು ಕ್ರಮವಹಿಸಲಾಗಿದೆ.
</td>
</tr>
<tr>
<td>ಆ)</td>
<td>ರಾಜ್ಯದ ರೈತರುಗಳಿಗೆ ಬರಬೇಕಾಗಿರುವ ಬಾಕಿ ಮೊತ್ತವೆಷ್ಟು; ಯಾವ ವರ್ಷದ ಕಂತುಗಳು ಬಾಕಿ ಉಳಿದಿದೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು)</td>
<td>
ಪಿ.ಎಂ.ಕಿಸಾನ್ ಯೋಜನೆಯು ಶೇ. 100 ರಷ್ಟು ಕೇಂದ್ರ ವಲಯ ಯೋಜನೆಯಾಗಿದ್ದು, ತಂತ್ರಾಂಶ ಆಧಾರಿತ ಪರಿಶೀಲನೆ, ರೈತರ ಅರ್ಜಿ ದಿನಾಂಕ, ಪ್ರಸ್ತುತ ರೈತನ ಅರ್ಹತೆ ಮೇರೆಗೆ ಆರ್ಥಿಕ ನೆರವು ಬಾಕಿಯಿರುವುದು ನಿರ್ಧರಿಸಲಾಗುತ್ತದೆ.
ಈ ಯೋಜನೆಯ ಆರ್ಥಿಕ ನೆರವು ವರ್ಗಾವಣೆಯ ತಂತ್ರಾಂಶ ಆಧಾರಿತ ದತ್ತಾಂಶವು ಕೇಂದ್ರ ಸರ್ಕಾರದ ಸುಪರ್ದಿಯಲ್ಲಿದ್ದು, ಅರ್ಹ ರೈತರಿಗೆ ಬಾಕಿಯಿರುವ ಆರ್ಥಿಕ
</td>
</tr>
</table>

| | | |
|---|---|---|
| | | ನೆರವಿನ ಮಾಹಿತಿಯನ್ನು ನೀಡಲು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. |
| ಇ) | ಕೃಷಿ ಇಲಾಖೆಯ ಅಧಿಕಾರಿಗಳು ಮಾಡಿರುವ ತಪ್ಪಿಗೆ ಇಡೀ ರಾಜ್ಯದ ರೈತರು ಈ ಯೋಜನೆಯಿಂದ ವಂಚಿತರಾಗಿರುವುದು ಸರಿಯೇ; ಆಗಿರುವ ತಪ್ಪನ್ನು ಸರಿಪಡಿಸಿ, ಬಾಕಿ ಉಳಿದಿರುವ ಮೊತ್ತವನ್ನು ರೈತರ ಖಾತೆಗೆ ಯಾವ ಕಾಲಮಿತಿಯೊಳಗೆ ಜಮೆ ಮಾಡಲಾಗುವುದು? | ಕೃಷಿ ಇಲಾಖೆ ಅಧಿಕಾರಿಗಳು ಯೋಜನೆಯ ಮಾರ್ಗಸೂಚಿಯನ್ವಯ ರೈತರ ನೋಂದಣಿ, ರೈತರ ಅರ್ಹತೆ ಪರಿಶೀಲನೆ, ಇ-ಕೆವೈಸಿ ಮಾಡಿಸುವುದು ಹಾಗು ಅರ್ಜಿದಾರರ ಭೂಮಾಲೀಕತ್ವ ಪರಿಶೀಲನೆಗಳನ್ನು ಕ್ರಮವಾಗಿ ನಿರ್ವಹಿಸಿರುತ್ತಾರೆ.<br><br>ಕೇಂದ್ರ ಸರ್ಕಾರದ ಈ ಯೋಜನೆಯಲ್ಲಿ ಪ್ರತಿ ನಾಲ್ಕು ತಿಂಗಳಿಗೊಮ್ಮೆ ಫಲಾನುಭವಿಗಳನ್ನು ಲಭ್ಯ ಮಾಹಿತಿ / ಮಾನದಂಡಗಳನ್ವಯ ತಂತ್ರಾಂಶ ಮೂಲಕ ಪರಿಶೀಲನೆಗೆ ಒಳಪಡಿಸಲಾಗುತ್ತದೆ ಈ ಪ್ರಕ್ರಿಯೆಯಲ್ಲಿ ಅನರ್ಹರೆಂದು ಗುರುತಿಸಲಾದ ಹಾಗೂ ಮರುಪರಿಶೀಲನೆ ಅವಶ್ಯವಿರುವ ಪ್ರಕರಣಗಳನ್ನು ಆರ್ಥಿಕ ನೆರವು ವರ್ಗಾವಣೆ ಪ್ರಕ್ರಿಯೆಯಲ್ಲಿ ತಡೆಹಿಡಿಯಲಾಗುತ್ತದೆ. ಈ ಪ್ರಕರಣಗಳನ್ನು ಭೌತಿಕ ಪರಿಶೀಲನೆ ವರದಿ ನಂತರ ಅಂತಿಮವಾಗಿ ಅರ್ಹ / ಅನರ್ಹಗೊಳಿಸಲಾಗುತ್ತದೆ.<br><br>ಅರ್ಹ ರೈತರಿಗೆ ಬಾಕಿಯಿರುವ ಆರ್ಥಿಕ ನೆರವಿನ ವರ್ಗಾವಣೆಯು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಈ ಸಂಬಂಧ ರಾಜ್ಯ ಸರ್ಕಾರದಿಂದ ಕೇಂದ್ರಕ್ಕೆ ಮನವಿಗಳನ್ನು ಸಲ್ಲಿಸಲಾಗಿದೆ. |

*ಕೃಇ 93 ಎಎಂಎಸ್ 2026*

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು